# <u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.</u>

## ಸಿ. ಸಿ. ನಂಃ **6/2025**

ಪಿ.ಡಬ್ಲ್ಯೂ-**1**
ಸಿ.ಡಬ್ಲ್ಯೂ- **1**

| | | |
|---|---|---|
| ಹೆಸರು | ಃ- | ಯುವರಾಜ ಹಂಪಿಹೋಳಿ |
| ತಂದೆ / ಗಂಡನ ಹೆಸರು | ಃ- | ಈಶ್ವರ |
| ವಯಾ | ಃ- | 22 ವರ್ಷ |
| ಉದ್ಯೋಗ | ಃ- | ಚಾಲಕ |
| ವಾಸಸ್ಥಳ | ಃ- | ಚೊಳಚಗುಡ್ಡ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 05-01-2026. |

*<u>ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ</u>*

1) ಪ್ರಕರಣದ ಆರೋಪಿಯ ಪರಿಚಯ ಇಲ್ಲ. ಚಾಸಾ-4 ರಿಂದಾ 6 ರವರ ಪರಿಚಯವಿದೆ.

2) ದಿಃ 15-11-2024 ರಂದು ನಾನು ನನ್ನ ಕಾರಿನಲ್ಲಿ ಚೊಳಚಗುಡ್ಡದಿಂದ ಚಾಸಾ -4 ರಿಂದಾ 6 ರವರನ್ನು ಹುಬ್ಬಳ್ಳಿಗೆ, ಬದಾಮಿ, ನರಗುಂದ, ನವಲಗುಂದ ಮಾರ್ಗವಾಗಿ ಬೆಳಿಗ್ಗೆ 9 ಗಂಟೆಗೆ ಹೊರಟಿದ್ದು, ಮದ್ಯಾಹ್ನ 1 ಗಂಟೆಯ ಸುಮಾರಿಗೆ ಬೆಳವಟಗಿ ಕ್ರಾಸ ಬಳಿ ಎದುರುಗಡೆಯಿಂದ ಒಂದು ಕೆ ಎಸ ಆರ ಟಿ ಸಿ ಬಸ್ಸು ಬೇರೊಂದು ವಾಹನಕ್ಕೆ ಒವರಟೇಕ ಮಾಡಲು ಹೋಗಿ ನನ್ನ ಕಾರಿನ ಬಲಗಡೆಗೆ ಬಡೆದಿರುತ್ತದೆ. ನನಗೆ ಬಲಗೈ ಹಾಗೂ ಬಲಕಣ್ಣಿಗೆ ಗಾಯವಾಗಿರುತ್ತದೆ. ನಂತರದಲ್ಲಿ ವಾಹನವನ್ನು ಪಕದಲ್ಲಿ ನಿಲ್ಲಿಸಿದ್ದು, ಸದರಿ ಬಸ್ಸಿನ ಚಾಲಕನು ನನ್ನ ಬಳಿ ಬಂದಿರುತ್ತಾನೆ. ನಂತರದಲ್ಲಿ ಪೋಲಿಸರು ಬಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರದಲ್ಲಿ ವಾಹನದ ಮಾಲಿಕರು ಚಾಸಾ 7 ರವರು ಬಂದು ನಾವು ಪ್ರಥಮ ಮಾಹಿತಿಯನ್ನು ನೀಡಿರುತ್ತೇವೆ.

3) ನಂತರ ನಾನು ಪ್ರಥಮ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಪ್ರಥಮ ಮಾಹಿತಿ ಈಗ ನೋಡುತ್ತಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.1 ಎ ಎಂದು ಗುರುತಿಸಲಾಯಿತು. ಸದರಿ ಅಪಗಾತವು ಆರೋಪಿತನ ತಪ್ಪಿನಿಂದ ಆಗಿರುತ್ತದೆ. ಮಾರನೇ ದಿನ ನನಗೆ ಪೋಲಿಸರು ಪಂಚನಾಮೆಗೆ ಗಟನಾ ಸ್ಥಳವಾದ ಬೆಳವಟಗಿ ಕ್ರಾಸ ಬಳಿ ಕರೆದು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಗೆ ನಾನು ಚಾಸಾ 2 ಮತ್ತು ಚಾಸಾ 3 ರವರು ಇರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.2 ಎ ಎಂದು ಗುರುತಿಸಲಾಯಿತು. ಚಾಯಾ ಚಿತ್ರವನ್ನು ನಿ.ಪಿ.3 ಎಂದು ಗುರುತಿಸಲಾಯಿತು.

4) ನಂತರ ಬಸ್ಸು ಹಾಗೂ ಕಾರು ಜಪ್ತ ಪಂಚನಾಮೆ ಠಾಣೆಯಲ್ಲಿ ಮಾಡಿರುತ್ತಾರೆ. ಪಂಚನಾಮೆಗೆ ನಾನು ಚಾಸಾ 2 ಮತ್ತು ಚಾಸಾ 3 ರವರು ಇರುತ್ತೇವೆ. ಸದರಿ ಬಸ್ಸು ಜಪ್ತ ಪಂಚನಾಮೆ ಹಾಗೂ ಕಾರು ಜಪ್ತು ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿ.ಪಿ.4 ಎಂದು ಗುರುತಿಸಲಾಯಿತು. 2 ಚಾಯಾ ಚಿತ್ರಗಳನ್ನು ಕ್ರಮವಾಗಿ ನಿ.ಪಿ.5 ಮತ್ತು 6 ಎಂದು ಗುರುತಿಸಲಾಯಿತು. ನಂತರ ವಾಹನವನ್ನು ಬಿಡಿಸಿಕೊಂಡು ನಾನು ವಾಹನ ಶೋ ರೂಮಿಗೆ ನೀಡಿರುತ್ತೇನೆ.

*(ಈ ಹಂತದಲ್ಲಿ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು.)*

***ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ –***

1) ದಿನಾಂಕಃ 15.11.2024 ರಂದು ಮಧ್ಯಾಹ್ನ 1.20 ಗಂಟೆಯ ಸುಮಾರಿಗೆ ನಾನು ಹುಬ್ಬಳ್ಳಿ-ಸೊಲ್ಲಾಪೂರ ರಸ್ತೆಯ ಮೇಲೆ ಬೆಳವಟಗಿ ಕ್ರಾಸ್ ಬೆನ್ನೆಹಳ್ಳದ ಬ್ರಿಡ್ಜ ಹತ್ತಿರ ನನ್ನ ಮಾರುತಿ ಕಂಪನಿಯ ಡಿಜೈರ ಕಾರ್ ನಂ.ಕೆಎ-29/ಸಿ-2793 ನೇದ್ದರನ್ನು ಚಲಾಯಿಸಿಕೊಂಡು ಹೋಗುತ್ತಿರುವಾಗ ನ್ಯಾಯಾಲಯದ ಎದುರಿಗೆ ಇದ್ದ ಆರೋಪಿತನು ತಮ್ಮ ಬಾಬತ್ ಕೆಎಸಆರಟಿಸಿ ಬಸ್ ನಂ.ಕೆಎ-29/ಎಫ್-1140 ನೇದ್ದನ್ನು ನವಲಗುಂದ ಕಡೆಯಿಂದ ನರಗುಂದ ಕಡೆಗೆ ಅತೀ ವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು, ಒಂದು ಲಾರಿಯನ್ನು ಓವರ ಟೇಕ ಮಾಡಲು ಹೋಗಿ ನರಗುಂದ ಕಡೆಯಿಂದ ನವಲಗುಂದ ಕಡೆಗೆ ರಸ್ತೆಯ ಮೇಲೆ ಎಡಬದಿಯಲ್ಲಿ ಬರುತ್ತದ್ದ

ನನ್ನ ಕಾರಿಗೆ ಗುದ್ದಿ ಅಪಘಾತ ಪಡಿಸಿ ಕಾರಿನ ಬಲಗಡೆ ಪೂರ್ತಿ ಜಖಂಗೊಳಿಸಿ ನನಗೆ ಬಲಕಣ್ಣಿನ ಹುಬ್ಬಿಗೆ ಸ್ವಲ್ಪ ರಕ್ತಗಾಯ ಹಾಗೂ ಬಲಕೈಗೆ ಒಳಪೆಟ್ಟು ಪಡಿಸಿರುತ್ತಾರೆ ಅಂದರೆ ಸರಿ.

2) ಸದರಿ ಗಟನೆಯ ಬಗ್ಗೆ ದಿಃ 15-11-2024 ರಂದು ಮದ್ಯಾಹ್ನ 12.10 ರಿಂದಾ 12.50 ಗಂಟೆಯವರೆಗೆ ನಿಪಿ 2 ರಂತೆ ಪಂಚನಾಮೆಯನ್ನು ಮಾಡಿ ಪಂಚನಾಮೆಯ ಕಾಲಕ್ಕೆ ಚಿತ್ರಿಕರಣವನ್ನು ಮಾಡಿರುತ್ತಾರೆ ಅಂದರೆ ಸರಿ. ಈ ಹಂತದ ಲ್ಲಿ ಕಡತದಲ್ಲಿ ಇದ್ದ ಅಣಕು ಮುದ್ರೆಯನ್ನು ತೆರೆದ ನ್ಯಾಯಾಲಯದಲ್ಲಿ ತೋರಿಸಿ ಸಾಕ್ಷಿಯು ಅದನ್ನು ಗುರುತು ಮಾಡಿರುತ್ತಾರೆ ಸದರಿ ಅಣಕು ಮುದ್ರೆಯನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಸದರಿ ಅಪಗಾತವು ಪಡಿಸಿದ ಬಸ್ಸಿನ ಚಾಲಕನು ನ್ಯಾಯಾಲಯದ ಎದುರು ಇರುತ್ತಾನೆ ಅಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಎನ ವ್ಹಿ ಪಿ ವಕೀಲರಿಂದ ಃ-</u>**

1) ನಾನು ಕಳೇದ 3 ವರ್ಷಗಳಿಂದ ಚಾಲಕನಾಗಿ ಕೆಲಸ ಮಾಡುತ್ತಿದ್ದು, ಪರವಾನಿಗೆ ಹೊಂದಿ ಈಗ 5 ವರ್ಷ ಆಗಿರುತ್ತದೆ. ನನ್ನ ಚಾಲನಾ ಪರವಾನಿಗೆಯನ್ನು ಪೋಲಿಸರಿಗೆ ನೀಡಿರುತ್ತೇನೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹಾಗೂ ನನ್ನ ಸಹೋದರ ಇಬ್ಬರು ಚಾಸಾ 7 ರವರ ಬಳಿ ವಾಹನ ಚಾಲಕನಾಗಿ ಇರುತ್ತೇನೆ. ಬೆಳಿಗ್ಗೆ 9.30 ಗಂಟೆಗೆ ಬಿಟ್ಟಿದ್ದು ಬದಾಮಿಯಲ್ಲಿ ತಿಂಡಿಗೆ ನಿಲ್ಲಿಸಿರುತ್ತೇವೆ. ಬದಾಮಿಯಿಂದ 11 ಗಂಟೆಗೆ ಬಿಟ್ಟಿರುತ್ತೇವೆ. ಬದಾಮಿಯಿಂದ ಬೆಳವಟಿಗೆಯು ಸುಮಾರು 60 ಕಿ ಮೀ ಅಂತರದಲ್ಲಿರಬಹುದು.

2) ಗಟನಾ ಸ್ಥಳವು ತಿರುವು ಇರುತ್ತದೆ ಅಂದರೆ ಸರಿ. ಸದರಿ ತಿರುವಿನಲ್ಲಿ ನನಗೆ ಬಹಳಷ್ಟು ವಾಹನಗಳು ಕಂಡಿರುತವೆ ಅಂದರೆ ಸರಿ. ಆಗ ಒಂದು ಲಾರಿ ಹಾಗೂ ಬಸ್ಸನ್ನು ನೋಡಿರುತ್ತೇನೆ. ಪ್ರಥಮವಾಗಿ ಲಾರಿಯನ್ನು ನೋಡಿರುತ್ತೇನೆ. ಆಗ ಲಾರಿ ಸುಮಾರು 40 ಮೀಟರ ಅಂತರದಲ್ಲಿ ಇರಬಹುದು. ನೋಡಿದ 3 ನಿಮಿಷದಲ್ಲಿ ಅಪಗಾತ ಆಗಿರಬಹುದು. ಲಾರಿಯನ್ನು ನೋಡಿದ ತಕ್ಷಣ ಬಸ್ಸನ್ನು ಕಂಡಿರುತ್ತೇನೆ. ಲಾರಿ ಮುಂದೆ ಇತ್ತು. ಲಾರಿ ನನಗೆ ದಾಟುವ ಪೂರ್ವದಲ್ಲಿ ಬಸ್ಸು ಬಂದಿರುತ್ತದೆ. ಲಾರಿಗೆ ಬಸ್ಸು ಮರಿಯಾಗಿದ್ದು ನಾನು ಕಂಡು ಬರುವದಿಲ್ಲ ಅಂದರೆ ಸರಿ.

3) ನನ್ನ ಕಾರು ರಸ್ತೆಯ ಎಡಬದಿ ಕಚ್ಚಾ ರಸ್ತೆಯಲ್ಲಿತ್ತು. ರಸ್ತೆಯ ಅಂಚಿನಲ್ಲಿರುವ ಬಿಳಿ ಪಟ್ಟಿಯ ಹೊರಗೆ ಇತ್ತು. ಲಾರಿಯು ತಮ್ಮ ರಸ್ತೆಯ ನಡುವಿನಲ್ಲಿತ್ತು. ಲಾರಿಗೆ ಹಾಗೂ ನನ್ನ ಕಾರಿಗೆ 30 ರಿಂದಾ 40 ಮೀಟರ ಅಂತರವಿತ್ತು. ಬಸ್ಸ ಚಾಲಕನು ಓವರ ಟೇಕ ಮಾಡಿ ಅಪಗಾತ ಪಡೆಸಿರುತ್ತಾನೆ ಅಂದರೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತನ ತಪ್ಪು ಇರುವದಿಲ್ಲ ಅಂದರೆ ಸರಿಯಲ್ಲ. ದೂರು ನೀಡುವ ಪೂರ್ವದಲ್ಲಿ ಮಾಲೀಕರಿಗೆ ತಿಳಿಸಿರುತ್ತೇನೆ. ಗಟನೆ ಆದ 30- 40 ನಿಮೀಷದಲ್ಲಿ ತಿಳಿಸಿರುತೇನೆ. ಮಾಲಿಕರಿಗೆ ಕರೆ ಮಾಡುವ ಸಮಯದಲ್ಲಿ ಪೋಲಿಸರು ಇದ್ದರು. ಮಾಲಿಕರಿಗೆ ಕರೆ ಮಾಡುವಾಗ ಪೋಲಿಸರು ಬಂದು 10 ನಿಮೀಷ ಆಗಿರುತ್ತದೆ. ಪೋಲಿಸರಿಗೆ ಯಾರು ತಿಳಿಸಿರುತ್ತಾರೆ ನನಗೆ ಗೊತ್ತಿರುವದಿಲ್ಲ.

4) ದೂರನ್ನು ಠಾಣೆಗೆ ಹೋಗಿ ನೀಡಿರುತ್ತೇನೆ. ಪೋಲಿಸರು ಗಟನಾ ಸ್ಥಳಕ್ಕೆ ಬಂದು ವಿಚಾರಣೆ ಮಾಡಿ ಠಾಣೆಗೆ ಬರಲು ತಿಳಿಸಿರುತ್ತಾರೆ ನಾನು ಮಾಲಿಕರು ಬಂದ ನಂತರ ಠಾಣೆ ಹೋಗಿರುತೇನೆ. ಮಾಲಿಕರು ಬರುವ ಪೂರ್ವದಲ್ಲಿ ನಾನು ಠಾಣೆಗೆ ಹೋಗಿರಲಿಲ್ಲ. ಠಾಣೆಗೆ ಸಂಜೆ 7.30 ಗೆ ಬಂದಿರುತ್ತೇನೆ. ನಾನು ದೂರನ್ನು ಬರೆದು ನೀಡಿರುತ್ತೇನೆ ಆಗ ಸುಮಾರು 8 ಗಂಟೆ ಆಗಿರಬಹುದು. ನಿಪಿ 1 ಕೈ ಬರಹದಲ್ಲಿರುವದಿಲ್ಲ ಅಂದರೆ ಸರಿ. ನಿಪಿ1 ನ್ನು ಠಾಣೆಯಲ್ಲಿ ಸಿಬ್ಬಂದಿಯವರು ಬರೆದಿರುತ್ತಾರೆ. ನಾನು ಹೇಳಿದ್ದನ್ನು ಅವರು ಬರೆದಿರುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

5) ದೂರು ನೀಡುವ ಪೂರ್ವದಲ್ಲಿ ನಾನು ಚಿಕಿತ್ಸೆ ಪಡೆದಿರುತ್ತೇನೆ ಆಗ ಪೋಲಿಸರು ಬಂದಿರುತ್ತಾರೆ. ಚಿಕಿತ್ಸೆ ಪಡೆಯುವ ಪೂರ್ವದಲ್ಲಿ ಗಟನೆಯು ಠಾಣೆಯಲ್ಲಿ ನೋಂದಾಗಿರುವುದಿಲ್ಲ. ಚಿಕಿತ್ಸೆಗೆ ಮದ್ಯಾಹ್ನ 3 ಗಂಟೆ ಆಗಿರಬಹುದು. ಆಸ್ಪತ್ರೆಗೆ ಮಾಲೀಕರು ಬಂದಿರುವದಿಲ್ಲ. ನಾನು ಚಿಕಿತ್ಸೆ ಪಡೆದು ನನ್ನ ವಾಹನದ ಬಳಿ ಹೋದ ಸಮಯದಲ್ಲಿ ಮಾಲೀಕರು ಬಂದಿರುತ್ತಾರೆ. ಆಗ ದೂರು ನೀಡಿರುವದಿಲ್ಲ.

6) ನಿಪಿ 2 ಮಾಡುವ ಸಮಯದಲ್ಲಿ ವಾಹನ ಠಾಣೆಯಲ್ಲಿತ್ತು. ಠಾಣೆಯಲ್ಲಿ ಬಸ್ಸು ಹಾಗೂ ಕಾರು ಇತ್ತು. ವಾಹನವನ್ನು ಹಾಗೇ ತಂದಿರುತ್ತಾರೆ. ನಿಪಿ6 ರಲ್ಲಿ ಯಾವದೇ ಜಕಂ ಕಂಡು

ಬರುತ್ತಿಲ್ಲ. ನನ್ನ ಸಂಗಡ ಇದ್ದವರನ್ನು ಬೆರೋಂದು ವಾಹನ ಮಾಡಿ ಕಳಿಸಿರುತ್ತಾರೆ. ಅಂದು ನನ್ನ ಮತ್ತು ಅವರ ಬೇಟಿ ಆಗಿರುವದಿಲ್ಲ. ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ ಅಂದರೆ ಸರಿ.

7) ಆರೋಪಿತನ ಯಾವದೇ ಅಲಕ್ಷತನ ಇರುವುದಿಲ್ಲ ಅಂದರೆ ಸರಿಯಲ್ಲ. ವಿಮೇ ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ಪ್ರಕರಣ ದಾಖಲ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿತನ ಯಾವದೇ ಓವರ ಟೇಕ ಮಾಡಿ ಅಪಗಾತ ಪಡಿಸಿರುವುದಿಲ್ಲ ಆತನ ಯಾವದೇ ತಪ್ಪು ಇರುವದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**